# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1190 (1182) |
| ಮಾನ್ಯ ಸದಸ್ಯರ ಹೆಸರು | ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | 17-12-2025 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿನ ಕೆಲವು ಉಪನೋಂದಣಾಧಿಕಾರಿಗಳು ಶಾಮೀಲಾಗಿ ನಕಲಿ ದಾಖಲೆಗಳ ಸಹಾಯದಿಂದ ಅಕ್ರಮವಾಗಿ ನೋಂದಣಿ ಮಾಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇಲ್ಲಿಯವರೆಗೆ ರಾಜ್ಯದಲ್ಲಿ ಕಂಡು ಬಂದ ಪ್ರಕರಣಗಳೆಷ್ಟು; (ವಿವರಗಳೊಂದಿಗೆ ಮಾಹಿತಿ ಒದಗಿಸುವುದು) | ಉಪನೋಂದಣಾಧಿಕಾರಿಗಳು ಶಾಮೀಲಾಗಿ ನಕಲಿ ದಾಖಲೆಗಳ ಸಹಾಯದಿಂದ ಅಕ್ರಮವಾಗಿ ನೋಂದಣಿ ಮಾಡಿಸುತ್ತಿರುವ ಯಾವುದೇ ಪ್ರಕರಣಗಳು ರಾಜ್ಯದ ಯಾವುದೇ ಜಿಲ್ಲಾ ನೋಂದಣಾಧಿಕಾರಿಗಳಿಂದ ವರದಿಯಾಗಿರುವುದಿಲ್ಲ. |
| ಆ | ಈ ರೀತಿಯಲ್ಲಿ ಅಕ್ರಮವಾಗಿ ನೋಂದಣಿ ಮಾಡಿಕೊಟ್ಟಿರುವ ಪ್ರಕರಣಗಳಲ್ಲಿ ಸರ್ಕಾರಿ ಅಧಿಕಾರಿಗಳ ಮೇಲೆ ಕೈಗೊಂಡ ಕಠಿಣ ಕ್ರಮಗಳೇನು; (ಸಂಪೂರ್ಣ ವಿವರಗಳೊಂದಿಗೆ ಮಾಹಿತಿ ಒದಗಿಸುವುದು) | |
| ಇ | ಈ ರೀತಿಯಲ್ಲಿ ನಕಲಿ ದಾಖಲೆಗಳನ್ನು ನೀಡಿ ಅಕ್ರಮ ನೋಂದಣಿಯನ್ನು ಮಾಡುವುದನ್ನು ತಡೆಗಟ್ಟಲು ಸರ್ಕಾರದ ಕ್ರಮಗಳೇನು; ಹಾಗೂ ಅಧಿಕಾರಿಗಳಿಗೆ ಈ ಅಕ್ರಮ ನೋಂದಣಿಯನ್ನು ಮಾಡದಂತೆ ಇರಲು ಸರ್ಕಾರದ ಕಠಿಣ ಆದೇಶಗಳೇನು? (ವಿವರಗಳೊಂದಿಗೆ ಮಾಹಿತಿ ಒದಗಿಸುವುದು) | ನಕಲಿ ದಾಖಲೆಗಳನ್ನು ನೀಡಿ ಅಕ್ರಮ ನೋಂದಣಿ ಮಾಡುವುದನ್ನು ತಡೆಗಟ್ಟಲು ಕಾವೇರಿ-2 ತಂತ್ರಾಂಶದಡಿಯಲ್ಲಿ ನೋಂದಣಿಗೆ ಹಾಜರಿದ್ದ ಪಕ್ಷಕಾರರ Aadhar Authentication ಮಾಡಲಾಗುತ್ತಿದ್ದು, ಇದರಿಂದ False impersonation ತಡೆದಂತಾಗಿದೆ ಹಾಗೂ ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳಿಗೆ ಸಂಬಂಧಪಟ್ಟ ಇಲಾಖೆಗಳ ತಂತ್ರಾಂಶ ಅಂದರೆ ಕೃಷಿ ಜಮೀನುಗಳಿಗೆ ಭೂಮಿ ತಂತ್ರಾಂಶ ಮತ್ತು ಕೃಷಿಯೇತರ ಸ್ವತ್ತುಗಳಿಗೆ ಇ-ಸ್ವತ್ತು ಮತ್ತು ಇ-ಆಸ್ತಿ ತಂತ್ರಾಂಶಗಳಿಂದ ಮಾತ್ರ ಮಾಹಿತಿ ಪಡೆದು, ನೋಂದಣಿಯಾಗುವಂತೆ ಕಾವೇರಿ-2 ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದೆ. ಇದರಿಂದ, ನಕಲಿ ದಾಖಲೆಗಳ ಆಧಾರದಲ್ಲಿ ಆಸ್ತಿಗಳ ನೋಂದಣಿ ಆಗುವುದನ್ನು ತಡೆಯಲಾಗಿದೆ. |

ಕಂಇ/429/ಎಂಎನ್‌ಎಸ್‌ಎ/2025

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು